

ವಿಕ್ರಂ ಹತ್ವಾರ್





‘ಇವತ್ತೊಂದು ದಿವ್ಸ ಬೇಡ... ಪ್ಲೀಸ್ ನೀಲೇಶ್...’ ಜ್ಯೋತ್ಸ್ನಾಳ ಬೆತ್ತಲೆಯು ಬಯಲಿಗಂಜಿ ಗೋಗರೆಯುತ್ತಿತ್ತು. ಈ ನಿರಾಕರಣೆಯು ಅರ್ಥವಾಗದೆ ನೀಲೇಶ್ ವ್ಯಗ್ರನಾಗುತ್ತಿದ್ದ. ಅವನ ಬೆತ್ತಲೆಗೇನೋ ತಲ್ಲಣ. ಅವಳು ತನ್ನೆದೆಯನ್ನು ತೆರೆಯಗೊಡದೆ, ‘ನಿನ್ನೆಯಷ್ಟೇ ಆಗಿದೆ’ ಎಂದಳು.

ಅಷ್ಟೇ ನವಿರಾಗಿ, ‘ಸೋ ವಾಟ್...’ ಎನ್ನುತ್ತ ಅವಳನ್ನು ಒಲಿಸಲೆತ್ನಿಸಿದ.

‘ಪ್ಲೀಸ್...’ ಎನ್ನುತ್ತ, ತನ್ನ ನಗ್ನತೆಯನ್ನೂ ಮೀರಿದ ಏನನ್ನೋ ಮುಚ್ಚಿಡಲು ಹೆಣಗಾಡಿದಳು. ನೀಲೇಶ್ ಕೊನೆಗೂ ಅವಳ ಕೈಗಳನ್ನು ಸರಿಸಿದ. ಅವಳೆದೆಯ ಮೇಲೆ ಕಚ್ಚಿದ ಗುರುತುಗಳಿದ್ದವು. ಅವನೊಳಗಿನ ವ್ಯಗ್ರತೆಯೆಲ್ಲ ಇಂಗಿತು. ಹುಚ್ಚು ರಭಸದ ನದಿಯಂತಿದ್ದ ನೀಲೇಶ್ ಕ್ಷಣ ಮಾತ್ರದಲ್ಲಿ ಮಂಜಿನಂತಾದ. ತನ್ನ ಸ್ಪರ್ಶದ ಮುಲಾಮಿನಿಂದಲೇ ಮಾಯಿಸುವ ಹಾಗೆ ಅವಳೆದೆಯನ್ನು ಸವರತೊಡಗಿದ.

‘ಏನಾಯ್ತು ನೀಲೇಶ್. ಇಂಫಾಲಕ್ಕೆ ಹೋಗಿ ಬಂದ ಮೇಲೆ ನೀವು ಬದಲಾಗಿದ್ದೀರಿ. ಇಲ್ಲಿದ್ದರೂ ಇಲ್ಲದವರ ಥರ.’

ಜೀವೋತ್ಕರ್ಷದ ಉಲುಹುಗಳಿಂದ ವಂಚಿತಗೊಂಡರೂ, ನೀಲೇಶನ ಕಣ್ಣುಗಳು ಪ್ರಶಾಂತವಾಗಿದ್ದವು; ಕಿಟಕಿಯಾಚೆಗಿನ ಆಕಾಶದಲ್ಲಿ ನೆಟ್ಟಿದ್ದವು. ಇಂಥ ನಿಶ್ಶಬ್ದ ಸಂಜೆಯ ಸಮ್ಮುಖವಾಗಿ, ತಾನು ಟೀನೇಜಿನಲ್ಲಿ ಮೋಹಿಸಿದ ನಟಿಯೊಂದಿಗೆ ಮಲಗಿರುವುದನ್ನು ನೆನೆದು ನೆನೆದೇ ಇದು ಖಂಡಿತ ನಿಜವಿರಲಾರದು ಅನ್ನಿಸುತ್ತಿತ್ತು. ತನ್ನ ಕಣ್ಣೊಳಗೆ ತುಂಬಿಕೊಂಡ ಆಕಾಶವನ್ನು ಅವಳ ಕಣ್ಣೊಳಗೆ ಇಳಿಸುತ್ತ, ‘ಗೊತ್ತಿಲ್ಲ ಜ್ಯೋತ್ಸ್ನಾ. ಆ ನಾಲ್ಕು ದಿನಗಳನ್ನು ಹೇಗೆ ಕಳೆದ ಅನ್ನುವುದೇ ಆಶ್ಚರ್ಯ. ನಾನು ಬದುಕಿ ಬಂದಿರುವುದೇ ಪವಾಡವೆನ್ನಿಸುತ್ತಿದೆ. ಇಂಫಾಲಕ್ಕೆ ದೇಶದ ಪ್ರಮುಖ ಸಾಹಿತಿಗಳೆಲ್ಲ ಬಂದಿದ್ದರು. ನಾನೊಂದು ಸೆಮಿನಾರಿನಲ್ಲಿ ಮಾತಾಡುವುದಿತ್ತು. ನನ್ನನ್ನಿರಿಸಿದ ಹೋಟೆಲ್ಲಿನ ರೂಮಿನಲ್ಲಿ ಜೊತೆಯಾಗಬೇಕಿದ್ದ ಮತ್ತೊಬ್ಬ ಸಾಹಿತಿ ಬರಲೇ ಇಲ್ಲ. ಆ ನಾಲ್ಕು ರಾತ್ರಿಗಳ ನೀರವತೆಯಲ್ಲಿ ನಾನು ಅನುಭವಿಸಿದ್ದನ್ನು ಹೇಗೆ ವಿವರಿಸಲಿ? ಈಗಿದ್ದವನು ಈಗಿಲ್ಲ ಎನ್ನುವಂತೆ ಒಂದು ವರ್ಷದ ಹಿಂದೆ ಆಕ್ಸಿಡೆಂಟಿನಲ್ಲಿ ಸತ್ತ ಅಣ್ಣ ಪದೇ ಪದೇ ನೆನಪಾಗುತ್ತಿದ್ದ. ಅವನು ಹೋದಮೇಲೂ ಈ ಜಗತ್ತು